**ಚಾಸಾಃ 51 ಪ್ರಾಸಾಃ 34**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ 2/2022**

ಹೆಸರು : ರವಿ ಬಿ.ಎಸ್

ತಂದೆಯ ಹೆಸರು : ಸಣ್ಣೇಗೌಡ

ಪ್ರಾಯ : 45 ವರ್ಷ

ಉದ್ಯೋಗ : ಸಿ.ಪಿ.ಐ, ಬೆಳ್ತಂಗಡಿ ಗ್ರಾಮಂತರ ಠಾಣೆ

ವಾಸ : ಬೆಳ್ತಂಗಡಿ

**ದಿನಾಂಕ 10.03.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 2013 ಸೆಪ್ಟೆಂಬರ್ ನಿಂದ ಅಕ್ಟೋಬರ್ 2014ರವರೆಗೆ ಸುಳ್ಯ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. 8.9.2013 ರಂದು ಪ್ರಕರಣದ ಕಡತವನ್ನು ಪಿ.ಎಸ್.ಐ ಗಿರೀಶ್ ರವರಿಂದ ಪಡೆದು ಪರಿಶೀಲಿಸಿ ತನಿಖೆ ಮುಂದುವರಿಸಿರುತ್ತೇನೆ. ದಿ. 23.2.2014 ರಂದು ರಾಮಚಂದ್ರ, ತಂದೆ ಬಿದ್ದಪ್ಪ ಗೌಡ, ಮರ್ಕಂಜ ಗ್ರಾಮ ರವರು ಜಿಲ್ಲಾ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ಅವರ ವಿರುದ್ಧ ದಸ್ತಗಿರಿ ಕ್ರಮ ಅನುಸರಿಸಿ ಸೂಕ್ತ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ದಿ. 15.5.2014 ರಂದು ವ್ಯವಸ್ಥಾಪಕ ನಿರ್ದೇಶಕರು ರಾಜೀವ್ ಗಾಂಧಿ ರೂರಲ್ ಹೌಸಿಂಗ್ ಕಾರ್ಪೋರೇಷನ್ ಬೆಂಗಳೂರು ರವರಿಗೆ 2005-06 ನೇ

ಸಾಲಿನಿಂದ 2008–09 ನೇ ಸಾಲಿನ ವರೆಗೆ ಗ್ರಾಮೀಣ ಆಶ್ರಯ ಯೋಜನೆಗೆ ಮತ್ತು ಇಂದಿರಾ ಆವಾಜ್ ಯೋಜನೆಯಡಿ ಮರ್ಕಂಜ ಗ್ರಾಮ ಪಂಚಾಯಿತಿಗೆ ಮಂಜೂರಾದಂತಹ ಫಲಾನುಭವಿಗಳ ವಿವರವನ್ನು ನೀಡುವಂತೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ದಿ. 10.6.2014 ರಂದು ಜಿಲ್ಲಾ ಕಾರ್ಯ ನಿರ್ವಹಣಾಧಿಕಾರಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಮಂಗಳೂರು ರವರಿಗೆ ಮರ್ಕಂಜ ಗ್ರಾಮ ಪಂಚಾಯಿತಿ 2005–06 ರಿಂದ 2009–10 ರವರೆಗೆ ಲೆಕ್ಕ ಪರಿಶೋಧನೆ ಮಾಡಿ ವರದಿ ನೀಡುವಂತೆ ಮರು ಕೋರಿಕೆ ಪತ್ರ ಸಲ್ಲಿಸಿರುತ್ತೇನೆ.

ದಿ. 21.8.2014 ರಂದು ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿಯಾದ ಬಿ.ವಿ. ಮಲ್ಲೇಶಪ್ಪ ರವರಿಗೆ ಆರೋಪಿತರಾದಂತಹ ಶಿವರಾಮಗೌಡ, ಪ್ರೇಮ್ ಸಿಂಗ್, ಕೇಶವ ಗೌಡ, ರಾಮಚಂದ್ರ ಹೆಚ್ ರವರು ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿದ ಬಗ್ಗೆ ದಾಖಲೆಗಳನ್ನು ನೀಡುವಂತೆ ಕೋರಿಕೆ ಪತ್ರ ಸಲ್ಲಿಸಿರುತ್ತೇನೆ. ದಿ. 18.10.2014 ರಂದು ಜಿಲ್ಲಾ ಪಂಚಾಯತ್ ಮುಖ್ಯ ಲೆಕ್ಕಾಧಿಕಾರಿಯವರಾದ ಎನ್ ಆರ್. ಉಮೇಶ್ ರವರಿಂದ ಮರ್ಕಂಜ ಗ್ರಾಮ ಪಂಚಾಯಿತಿಯ ಲೆಕ್ಕ ಪರಿಶೋಧನಾ ವರದಿಯನ್ನು ಸ್ವೀಕರಿಸಿ ತನಿಖೆಗೆ ಅಳವಡಿಸಿಕೊಂಡಿರುತ್ತೇನೆ. ದಿ. 10.10.2014 ರಂದು ನಾನು ವರ್ಗಾವಣೆಗೊಂಡ ಕಾರಣ ಪ್ರಕರಣದ ತನಿಖೆಯನ್ನು ಬ್ರಿಜೇಶ್ ಮ್ಯಾಥ್ಯೂ ರವರಿಗೆ ವಹಿಸಿಕೊಟ್ಟಿರುತ್ತೇನೆ.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ರಾಜೀವ್ ಗಾಂಧಿ ರೂರಲ್ ಹೌಸಿಂಗ್ ಕಾರ್ಪೋರೇಷನ್ ಬೆಂಗಳೂರು ರವರಿಗೆ ನೀಡಿದ ಮನವಿ ಪತ್ರವನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ಮೂಲ ಪ್ರಕರಣದಲ್ಲಿ ನಿಪಿ–211 ಎಂದು ಗುರುತಿಸಲಾಗಿದೆ. ಆರೋಪಿತರು ಕರ್ತವ್ಯ ನಿರ್ವಹಿಸುತ್ತಿದ್ದ ಬಗ್ಗೆ ದೃಢಪತ್ರ ನೀಡುವಂತೆ ಕಾರ್ಯ ನಿರ್ವಹಣಾಧಿಕಾರಿಗಳಿಗೆ ನೀಡಿದ ಮನವಿ ಪತ್ರವನ್ನು ಅದನ್ನು ಈಗಾಗಲೇ ಮೂಲ

ಪ್ರಕರಣದಲ್ಲಿ  ನಿಪಿ-212 ಎಂದು ಗುರುತಿಸಲಾಗಿದೆ. ಲೆಕ್ಕ ಪರಿಶೋಧನಾ ವರದಿ ನೀಡುವಂತೆ ಕಾರ್ಯ ನಿರ್ವಹಣಾಧಿಕಾರಿಗಳಿಗೆ ನೀಡಿದ ನೋಟೀಸನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮೂಲ ಪ್ರಕರಣದಲ್ಲಿ  ನಿಪಿ-213 ಎಂದು, ಗುರುತಿಸಲಾಗಿದೆ. ಕಾರ್ಯ ನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಮಂಗಳೂರು ರವರು ಸಲ್ಲಿಸಿದ ಮರ್ಕಂಜ ಗ್ರಾಮ ಪಂಚಾಯಿತಿಯ ಲೆಕ್ಕ ಪರಿಶೋಧನಾ ವರದಿಯನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-68 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಎನ್.ಕೆ ವಕೀಲರಿಂದಃ**

2014 ನೇ ಸಾಲಿನಲ್ಲಿ ನಾನು ಕರ್ತವ್ಯದಲ್ಲಿದ್ದೆ. ನಾನು ಸುಳ್ಯ ಪೊಲೀಸ್ ಠಾಣೆಯಲ್ಲಿ ಕರ್ತವ್ಯ  ನಿರ್ವಹಿಸುತ್ತಿದ್ದ ಸಮಯದಲ್ಲಿ ಜಿಲ್ಲಾ ಪಂಚಾಯತ್ ನ ಲೆಕ್ಕ ಪರಿಶೋಧನಾ ಸಮಿತಿ ಸದಸ್ಯರು ನಮ್ಮ ಪೊಲೀಸ್ ಠಾಣೆಯಲ್ಲಿ ಈಗಾಗಲೇ ಜಪ್ತಿ ಮಾಡಲಾಗಿದ್ದ ಮರ್ಕಂಜ ಗ್ರಾಮ ಪಂಚಾಯಿತಿಯ ದಾಖಲೆಗಳನ್ನು ಪೊಲೀಸ್ ಠಾಣೆಯಲ್ಲೇ ಪರಿಶೀಲನೆ ಮಾಡಿರುತ್ತಾರೆ. ಆ ರೀತಿ ಲೆಕ್ಕ ಪರಿಶೋಧನಾ ಸಮಯದಲ್ಲಿ ಮರ್ಕಂಜ ಗ್ರಾಮ ಪಂಚಾಯಿತ್ ನ 2005 ರಿಂದ 2009 ನೇ ಸಾಲಿನ ಆಶ್ರಯ ಯೊಾಜನೆ ಮತ್ತು ಇಂದಿರಾ ಆವಾಜ್ ಯೋಜನೆಯ ಎಲ್ಲಾ ದಾಖಲೆಗಳನ್ನು ಈಗಾಗಲೇ ಪ್ರಕರಣದಲ್ಲಿ ಜಪ್ತಿ ಮಾಡಲಾಗಿತ್ತು ಎಂದರೆ ಸರಿಯಲ್ಲ. ಕೆಲವು ದಾಖಲೆಗಳು ಪಂಚಾಯತ್ ನಲ್ಲಿತ್ತು. ಲೆಕ್ಕ ಪರಿಶೋಧನಾ ಸಮಿತಿಯ ಸದಸ್ಯರು ಕೆಲವು ದಾಖಲೆಗಳನ್ನು ಗ್ರಾಮ ಪಂಚಾಯತ್ ನಲ್ಲಿ ಪರಿಶೋದನೆ ಮಾಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಲೆಕ್ಕ ಪರಿಶೋಧನಾ ಸವಿತಿಯ ಸದಸ್ಯರು ಠಾಣೆಯಲ್ಲಿದ್ದ ದಾಖಲೆಗಳನ್ನು ಪರಿಶೀಲನೆ ಮಾಡಲು ಅನುಮತಿ ನೀಡಲು ನನಗೆ ಅವಕಾಶ ಇರುತ್ತದೆ. ಈ ಬಗ್ಗೆ ಜಿಲ್ಲಾ ಪಂಚಾಯತ್ ನ ಮುಖ್ಯ ಲೆಕ್ಕಾಧಿಕಾರಿಗಳು ನನಗೆ ಪತ್ರ ನೀಡಿರುತ್ತಾರೆ. ಅದರ ಪ್ರತಿ ಈಗ

ನನ್ನ ಕಡತದಲ್ಲಿ ಇರುತ್ತದೆ. ಕಡತಗಳನ್ನು ಪರಿಶೀಲಿಸಿದ ನಂತರ ನಾನು ಅಲ್ಲೇ ಲೆಕ್ಕ ಪರಿಶೋಧನಾ ವರದಿಯನ್ನು ಪಡೆದುಕೊಂಡಿರುವುದಿಲ್ಲ.

ದಿ. 10.6.2014 ರಂದು ಲೆಕ್ಕ ಪರಿಶೋಧನಾ ವರದಿ ನೀಡುವಂತೆ ನಾನು ಜಿಲ್ಲಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಯವರಿಗೆ ಪತ್ರ ಬರೆದಿರುತ್ತೇನೆ. ಆ ರೀತಿ ಪತ್ರ ಬರೆಯುವ ಮೊದಲು ಲೆಕ್ಕ ಪರಿಶೋದನೆ ಆಗಿತ್ತು ಎಂದರೆ ಸರಿಯಲ್ಲ. ಚಾಸಾ-41 ಉಮೇಶ್ ರವರು ನನಗೆ ಲೆಕ್ಕ ಪರಿಶೋಧನಾ ವರದಿಯನ್ನು ನೀಡಿರುತ್ತಾರೆ. ಲೆಕ್ಕ ಪರಿಶೋಧನಾ ಸಮಿತಿಯ ಸದಸ್ಯರು ನಮ್ಮ ಠಾಣೆಗೆ ಬಂದು ಠಾಣೆಯಲ್ಲಿದ್ದ ಮರ್ಕಂಜ ಗ್ರಾಮ ಪಂಚಾಯಿತಿಯ ದಾಖಲೆಗಳನ್ನು ಪರಿಶೋಧನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದೋಷಾರೋಪಣೆ ಪಟ್ಟಿಯ ನ್ನು ಸಲ್ಲಿಸುವ ಉದ್ದೇಶದಿಂದ ಕೆಲವು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-68 ರಂತೆ ಸುಳ್ಳು ವರದಿ ಎಂದರೆ ಸರಿಯಲ್ಲ. ಅದು ಸುಳ್ಳು ವರದಿಯಾದ ಕಾರಣಕ್ಕೆ ನಮಗೆ ಮೂಲ ವರದಿಯನ್ನು ನೀಡದೇ ದೃಢೀಕೃತ ವರದಿಯನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಅದು ನೈಜ ವರದಿ ಅಲ್ಲದ ಕಾರಣ ಮೂಲ ಪ್ರತಿ ನೀಡುವಂತೆ ನಾನು ಯಾವುದೇ ಪತ್ರ ವ್ಯವಹಾರ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(2 ಮತ್ತು 3ನೇ ಆರೋಪಿ ಪರ ವಕೀಲರು ಮೇಲಿನ ಪಾಟೀ ಸವಾಲನ್ನೇ ಅಳವಡಿಸಿಕೊಂಡಿರುತ್ತಾರೆ)

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ